ಇ) ಹನಿ ನೀರಾವರಿ ಉಪಕರಣಗಳು ವಾಣಿಜ್ಯ ಸರಕುಗಳಾಗಿರುವುದರಿಂದ ವ್ಯಾಟ್ ಕಾಯ್ದೆಯಡಿ ತೆರಿಗೆ ವಿಧಿಸಲಾಗುತ್ತಿದೆ.

ಈ) ಹೌದು ಈ ವಿಷಯವು ವ್ಯಾಟ್ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ಮಟ್ಟದಲ್ಲಿ ರಚಿಸಲಾಗಿರುವ ರಾಜ್ಯಗಳ ಹಣಕಾಸು ಸಚಿವರ ಅಧಿಕಾರಯುಕ್ತ ಸಮಿತಿಯ ಪರಿಶೀಲನೆಯಲ್ಲಿರುತ್ತದೆ.

4713 (5407) ಶ್ರೀ ಕಿರಣ್‌ಕುಮಾರ್ ಕೆ.ಎಸ್. :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಚಿಕ್ಕನಾಯಕನಹಳ್ಳಿ ತಾಲ್ಲೂಕು ಚಿಕ್ಕನಾಯಕನಹಳ್ಳಿಯಲ್ಲಿ ಪಿ.ಎಲ್.ಡಿ ಬ್ಯಾಂಕಿನಲ್ಲಿ ಬಡ್ಡಿಮನ್ನಾ ಇದ್ದರೂ ತೆಂಗಿನ ಸಸಿ ಸಾಲಕ್ಕೆ ಬಡ್ಡಿ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಬಂದಿದ್ದಲ್ಲಿ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶ್‌ಪಾಂಡೆ (ಸಹಕಾರ ಸಚಿವರು)

1) ಮತ್ತು 2) ತೋಟಗಾರರಿಗೆ ನೀಡಿರುವ ತೋಟಗಾರಿಕೆಯ ಸಾಲಗಳ ಕೆಲವು ಯೋಜನೆಗಳಲ್ಲಿ ಪ್ರಾರಂಭಿಕ ಅವಧಿ (ಗೆಸ್ಟೇಷನ್ ಅವಧಿ) ಇದ್ದು ಈ ಅವಧಿಯಲ್ಲಿ ರೈತರು ಕೇವಲ ಬಡ್ಡಿ ತಗಾದೆ ಮರು ಪಾವತಿ ಮಾಡಬೇಕಾಗಿರುತ್ತದೆ. ಈ ಅವಧಿಯಲ್ಲಿ ಅಸಲು ತಗಾದೆ ಇರುವುದಿಲ್ಲ. ಸರ್ಕಾರದ ಬಡ್ಡಿ ಮನ್ನಾ ಆದೇಶದಂತೆ ಕೇವಲ ಬಡ್ಡಿ ಮರು ಪಾವತಿ ಮಾಡುವ ಪ್ರಕರಣಗಳಿಗೆ ಈ ಸೌಲಭ್ಯ ಅನ್ವಯಿಸುವುದಿಲ್ಲ. ಅದರಲ್ಲಿ ತೆಂಗಿನ ಸಸಿ ಸಾಲವು ಸೇರುತ್ತದೆ.

4714 (5408) ಶ್ರೀ ಕಿರಣ್‌ಕುಮಾರ್ ಕೆ.ಎಸ್. (ಕಳ್ಳಂಬಳ್ಳ) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಆಫ್‌ಸೆಟ್ ಮುದ್ರಣ ಯಂತ್ರವನ್ನು ಸರಿಯಾಗಿ ಉಪಯೋಗಿಸದೇ, ತರಾತುರಿಯಲ್ಲಿ ಹರಾಜು ಮಾಡಿದ್ದು, ನಿಜವೇ;

ಆ) ಆಫ್‌ಸೆಟ್ ಮುದ್ರಣ ಯಂತ್ರವನ್ನು ಯಾವ ವರ್ಷ, ಎಷ್ಟು ಬೆಲೆಗೆ ಖರೀದಿಸಲಾಗಿದೆ;

ಇ) ಅದರಿಂದ ಮುದ್ರಿಸಿದ ಪ್ರತಿಗಳ ಸಂಖ್ಯೆ ಹಾಗೂ ಮುದ್ರಣ ಮೌಲ್ಯ ಎಷ್ಟು;

ಈ) ಈ ಮುದ್ರಣ ಯಂತ್ರವನ್ನು ಯಾವ ವರ್ಷ ಎಷ್ಟು ಬೆಲೆಗೆ ಮಾರಲಾಯಿತು;

ಉ) ಆಫ್‌ಸೆಟ್ ಮುದ್ರಣ ಯಂತ್ರವನ್ನು ಮಾರಿದ ಮೇಲೆ ವಿಶ್ವವಿದ್ಯಾಲಯ, ಹೊರಗಿನ ಮುದ್ರಣಾಲಯಗಳಿಂದ ಇದುವರೆಗೂ ಮಾಡಿಸಿದ ವರ್ಷವಾರು ಮುದ್ರಣ ವೆಚ್ಚವೆಷ್ಟು?

ಶ್ರೀ ಕೆ. ಶ್ರೀನಿವಾಸ್ (ಕೃಷಿ ಸಚಿವರು) :

ಅ) ಇಲ್ಲ

ಆ) ಆಫ್‌ಸೆಟ್ ಮುದ್ರಣ ಯಂತ್ರವನ್ನು 1996 ರಲ್ಲಿ 9,59,790/– ರೂ.ಗಳಿಗೆ ಖರೀದಿಸಲಾಗಿದೆ.

ಇ) ಒಟ್ಟು ಮುದ್ರಿಸಲಾದ ಪ್ರತಿಗಳ ಸಂಖ್ಯೆ 6,21,740/– ಹಾಗೂ ಅದರ ಮೌಲ್ಯ 5,50,000/– ರೂ.ಗಳು

ಈ) ಆಫ್‌ಸೆಟ್ ಮುದ್ರಣ ಯಂತ್ರವನ್ನು 2004 ರಲ್ಲಿ 3,40,000/– ರೂ.ಗಳಿಗೆ ಮಾರಲಾಗಿದೆ.

ಉ) 2004–05 ರಲ್ಲಿ 1,84,885/– ರೂ.ಗಳನ್ನು ವೆಚ್ಚ ಮಾಡಲಾಗಿದೆ.

4715 (5023) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಡಿತರ ಕಾರ್ಡ್ ವಿತರಿಸಲು ಸರ್ವೆ ಕಾರ್ಯ ಮುಗಿದಿದ್ದು, ಪಡಿತರ ಕಾರ್ಡ್ ಯಾವಾಗ ವಿತರಿಸಲಾಗುವುದು;

ಆ) ಆರ್ಥಿಕವಾಗಿ ಹಿಂದುಳಿದ ಎಲ್ಲಾ ಕುಟುಂಬಗಳಿಗೂ ಕಾರ್ಡ್ ವಿತರಿಸಲಾಗುವುದೇ;

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ಮನೆ ಮನೆ ಪುನರ್ ಸಮೀಕ್ಷಾ ಕಾರ್ಯ ಮುಕ್ತಾಯಗೊಂಡ ಬಳಿಕ, 15 ಆಗಸ್ಟ್ 2005 ರ ನಂತರ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

ಆ) ಹೌದು.

4716 (5025) ಶ್ರೀ ಕೃಷ್ಣಮೂರ್ತಿ ಕೆ.ಎಂ (ಕಡೂರು) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 2005–06 ನೇ ಸಾಲಿನಲ್ಲಿ ರೈತರ ಕೃಷಿ ಸಾಲದ ಬಡ್ಡಿ ಹಾಗೂ ಸುಸ್ತಿ ಬಡ್ಡಿ ಮನ್ನಾ ವಿಚಾರದಲ್ಲಿ ಕಡೂರು ಪಿ.ಎಲ್.ಡಿ. ಬ್ಯಾಂಕಿನಿಂದ ಬಡ್ಡಿ ಮನ್ನಾ ಸೌಲಭ್ಯ ನೀಡಲಾಗಿದೆಯೇ;